Dr. R. NAGAN GOWDA.—This statement was made on 23rd March 1963 saying that an investigation should be carried out. 4 years have lapsed since then. I want to know whether any investigation has been done either to prepare the project report on the suggested lines and also the master plan ?

Sri VEERENDRA PATIL.—I have already stated that two Circles have been formed already and they are working at Hyderabad and a Technical Committee consisting of State Chief Engineers has been constituted and they have done some work. But I can say that the pace of the progress is rather slow.

1-30 P.M.

ಶ್ರೀ ಎಚ್. ಡಿ. ದೇವೆಗೌಡ.—ಉತ್ತರದಲ್ಲಿ ಗೋದಾವರಿ ನೀರನ್ನು ಕೃಷ್ಣಾ ಬೇಸಿನ್‌ಗೆ ಡೈವರ್ಟ್ ಮಾಡುವ ಬಗ್ಗೆ ಪರಿಶೀಲನೆ ನಡೆಯುತ್ತಿದೆ ಮತ್ತು ಅದಕ್ಕಾಗಿ ಒಂದು ಟೆಕ್ನಿಕಲ್ ಕಮಿಟಿ ನೇಮಿಸಿದ್ದಾರೆ ಎಂದು ತಿಳಿಸಿದಿರಿ. ಕೃಷ್ಣಾ ಬೇಸಿನ್ ನೀರನ್ನು 1963 ರಲ್ಲಿ ಜೆಂಜೆಟೀವ್ ಆಗಿ 600 ಟಿ.ಎಂ.ಸಿ.ಎಫ್.ಟಿ. ಅಲೋಕೇಟ್ ಮಾಡಿದ್ದರು. ಆದಾದಮೇಲೆ 1250 ಟಿ.ಎಂ.ಸಿ.ಎಫ್.ಟಿ. ನೀರು ನಮಗೆ ಬರಬೇಕು ಎಂದು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದಲ್ಲಿ ಒಂದು ಡಿಮ್ಯಾಂಡ್ ಇಟ್ಟಿದ್ದೀರಿ. ಅದನ್ನು ಪರಿಶೀಲನೆ ಮಾಡಿ ನಮಗೆ ಕೊಟ್ಟಂಥ 600 ಟಿ.ಎಂ.ಸಿ.ಎಫ್.ಟಿ. ಗಿಂತ ಹೆಚ್ಚಾಗಿ ನೀರು ನಮಗೆ ಬರಬೇಕು ಎನ್ನುವ ಬಗ್ಗೆ ಕೃಷ್ಣಾ ಬೇಸಿನ್‌ನಲ್ಲಿ ಖಚಿತವಾಗಿ ಎಷ್ಟು ನೀರು ಸಿಕ್ಕುತ್ತದೆ ? ಮೈನೂರಿಗೆ ಎಷ್ಟು ಬರುತ್ತದೆ ? ಮಹಾರಾಷ್ಟ್ರ ಆಂಧ್ರಕ್ಕೆ ಎಷ್ಟು ಹೋಗುತ್ತದೆ ಎನ್ನುವ ವಿಚಾರದಲ್ಲಿ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಹೇಳಿದ್ದೇನೆ. ಎರಡು ಸರ್ಕಲ್ ಮಾಡಿದ್ದಾರೆ. ಒಂದು ಸರ್ಕಲ್ ಕೃಷ್ಣಾ ಮತ್ತು ಗೋದಾವರಿ ನದಿಯಲ್ಲಿ ನೀರು ಎಷ್ಟು ಇದೆ ಎಂದು ಅಸೆಸ್ ಮಾಡುವುದಕ್ಕೆ ಇನ್ನೊಂದು ಸರ್ಕಲ್ ಯಾವ ಸ್ಥಳದಿಂದ ಗೋದಾವರಿ ನೀರನ್ನು ಕೃಷ್ಣಾ ನದಿಗೆ ಡೈವರ್ಟ್ ಮಾಡಬಹುದು ಎಂದು ಕಂಡುಹಿಡಿಯುವುದಕ್ಕೆ. ಹೀಗೆ ಎರಡು ಕಮಿಟಿಯವರು ಕೆಲಸ ಮಾಡುತ್ತಿದ್ದಾರೆ. ಆದರೆ ಆ ಕೆಲಸ ನಿಧಾನವಾಗಿದೆ.

Sri S. SIVAPPA.—Is the Government aware that their demand of 1250 T.C.M.C.Ft. will not be available if the waters of Godavari are not diverted to Krishna ?

Sri VEERENDRA PATIL.—As already mentioned in the Gulhati Commission Report itself, the water in Krishna basin is scarce. That is why they are now thinking of the possibility of diverting Godavari surplus water into Krishna Basin.

Breakdown of Electricity

*Q.—670. Sri K. P. NADAGOWDA (Mudhol).—

Will the Minister for Public Works be pleased to state :—

(a) whether it has come to the notice of the Government that due to the breakdown of Electricity supply in Rabakavi, Banahatti, Mudhol and Mahalingapur of Bijapur District, the milles and pumpsets were stopped and thus the owners sustained loss and public were put to inconvenience ;

(*b*) whether it has come to the notice of the Government that the state of affairs has not improved since one month ?

(*c*) if so, the action taken by them to improve the situation ?

A.—Sri VEERENDRA PATIL (Minister for Public Works).—

(*a*) There were some interruptions to these areas during the period 6th April 1967 to 24th April 1967.

(*b*) The position has improved after 27th April 1967.

(*c*) The Mysore State Electricity Board have already commissioned a higher capacity transformer at Mahalingapur and another is also proposed to be installed.

ಶ್ರೀ ಕೆ. ಪಿ. ನಾಡಗೌಡ.—ಇನ್ನೊಂದು ಹೈಯರ್ ಕೆಪಾಸಿಟಿ ಟ್ರಾನ್ಸ್‌ಫಾರ್ಮರ್ ಮಹಾಲಿಂಗಪುರದಲ್ಲಿ ಯಾವಾಗ ಹಾಕುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಟ್ರಾನ್ಸ್‌ಫಾರ್ಮರುಗಳ ಕೊರತೆ ಇದೆ. ಇನ್ನೊಂದು ಟ್ರಾನ್ಸ್‌ಫಾರ್ಮರನ್ನು ಮಹಾಲಿಂಗಪುರದಲ್ಲಿ ಹಾಕಿ ಮುಧೋಳಿಗೆ ವಿದ್ಯುತ್ ಒದಗಿಸುವ ವಿಚಾರ ಇಟ್ಟುಕೊಂಡಿದ್ದೇವೆ. 6 ತಿಂಗಳೊಳಗೆ ಟ್ರಾನ್ಸ್‌ಫಾರ್ಮರನ್ನು ತರಿಸಿ ಅಲ್ಲಿಗೆ ಕೊಟ್ಟಾಗ ಪರಿಸ್ಥಿತಿ ಸುಧಾರಿಸುತ್ತದೆ.

ಶ್ರೀ ಕೆ. ಪಿ. ನಾಡಗೌಡ.—ಮಹಾಲಿಂಗಪುರ, ಬನಹಟ್ಟಿ, ರಬಕವಿ, ಮುಧೋಳ್ ಮತ್ತು ಜಮಖಂಡಿ ಔದ್ಯೋಗಿಕ ಕೇಂದ್ರ ಆಗಿದ್ದುದರಿಂದ ಎರಡನೇ ಟ್ರಾನ್ಸ್‌ಫಾರ್ಮನಿಂದ ಸಾಕಷ್ಟು ವಿದ್ಯುತ್ ಸರಬರಾಜು ಆಗುವುದಿಲ್ಲ ಅನಿಸುತ್ತದೆ. ಅದಕ್ಕೆ ಸರ್ಕಾರದ ಅಭಿಪ್ರಾಯ ಏನು ?

ಶ್ರೀ ವೀರೇಂದ್ರ ಪಾಟೀಲ್.—ಒಂದು ಟ್ರಾನ್ಸ್‌ಫಾರ್ಮರನ್ನು ಈಗಾಗಲೇ ಹಾಕಿದ್ದೇವೆ. ಅದರಿಂದ ರಬಕವಿ, ಬನಹಟ್ಟಿ ಮತ್ತು ಮಹಾಲಿಂಗಪುರದ ವಿದ್ಯುತ್ ಪೂರೈಕೆ ಆಗುತ್ತದೆ. ಇನ್ನೊಂದು ಮಹಾಲಿಂಗಪುರದಲ್ಲಿ ಸಬ್‌ಸ್ಟೇಷನ್ ಹಾಕಿದರೆ ಮುಧೋಳಿಗೆ ಬೇಕಾದ ವಿದ್ಯುತ್ತನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಿಕೊಡಬಹುದು. ಲೋಡ್ ಹೆಚ್ಚಾದಂತೆ ಹೆಚ್ಚು ಕೆಪಾಸಿಟಿ ಟ್ರಾನ್ಸ್‌ಫಾರ್ಮರ್ ಹಾಕುವುದಕ್ಕೆ ತಯಾರು ಇದ್ದೇವೆ.

ಶ್ರೀ ಕೆ. ಪಿ. ನಾಡಗೌಡ.—ಇತ್ತೀಚೆಗೆ ಜಮಖಂಡಿ ಪಟ್ಟಣವನ್ನು ಸರ್ಕಾರದವರು ವಿದ್ಯುತ್ ಸರಬರಾಜು ಸಲುವಾಗಿ ತೆಗೆದುಕೊಂಡಿದ್ದಾರೆ. ಆದ್ದರಿಂದ ಹೆಚ್ಚಾಗಿ ವಿದ್ಯುತ್ ಪೂರೈಕೆ ಬೇಕಾಗುತ್ತದೆ ಎನ್ನುವುದು ಗಮನದಲ್ಲಿ ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಲೋಡು ಹೆಚ್ಚಾದಂತೆ ಅದೇ ಟ್ರಾನ್ಸ್‌ಫಾರ್ಮರ್ ಸಾಕಾದರೆ ಅದನ್ನೇ ಇಡುತ್ತೇವೆ. ಇಲ್ಲದಿದ್ದರೆ ಇನ್ನೊಂದು ಕೊಡುತ್ತೇವೆ.

ಶ್ರೀ ಎಂ. ಕೆ. ಬೊಮ್ಮೈಗೌಡ.—ಎಚ್ಚರಿಕೆಯಿಂದ ಟ್ರಾನ್ಸ್‌ಫಾರ್ಮರ್ ಬದಲಾವಣೆ ಮಾಡಿ ಹೆಚ್ಚು ವಿದ್ಯುತ್‌ನ್ನು ಸರಬರಾಜು ಮಾಡುವುದರ ಬದಲು ವರ್ಕ್‌ಲೋಡ್ ಜಾಸ್ತಿಮಾಡುತ್ತಾ ಟ್ರಾನ್ಸ್‌ಫಾರ್ಮರ್ ಬದಲಾವಣೆ ಮಾಡದೇ ಇರುವುದರಿಂದ ಹೆಚ್ಚಾಗಿ ವಿದ್ಯುತ್ ಬ್ರೇಕ್‌ಡೌನ್‌ಗೆ ಅವಕಾಶ ವಾಗಿದೆ ಎನ್ನುವುದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.— ನಮಗೆ ಬೇಕಾದ ಟ್ರಾನ್ಸ್‌ಫಾರ್ಮರ್ ಎಲ್ಲಾ ಒಂದೇ ದಿವಸ ಸಿಕ್ಕುವುದಿಲ್ಲ. ಅವುಗಳನ್ನು ಆರ್ಡರ್ ಮಾಡಬೇಕಾಗುತ್ತದೆ. ಅವುಗಳನ್ನು ತಯಾರು ಮಾಡಿ ಸಪ್ಲೈ ಮಾಡುತ್ತಾರೆ. ಎಲ್ಲೆಲ್ಲಿ ಲೋಡು ಹೆಚ್ಚಾಗಿದೆ ಯಾವ ಟ್ರಾನ್ಸ್‌ಫಾರ್ಮರ್ ಹಾಕಬೇಕು ಎಂದು ಬೋರ್ಡಿನವರು ಕಾರ್ಯಕ್ರಮ ಹಾಕಿಕೊಂಡು ಟ್ರಾನ್ಸ್‌ಫಾರ್ಮರುಗಳನ್ನು ಆರ್ಡರು ಮಾಡುತ್ತಾರೆ. ಬಂದಂಥ ಟ್ರಾನ್ಸ್‌ಫಾರ್ಮರನ್ನು ಎಲ್ಲೆಲ್ಲಿ ಲೋಡು ಹೆಚ್ಚಾಗಿರುತ್ತದೋ ಅಲ್ಲಲ್ಲಿಗೆ ಕಳುಹಿಸಿಕೊಡುತ್ತಾರೆ.

ಶ್ರೀ ಸಿದ್ದಯ್ಯ ಕಾಶೀಪುರ್.—ಈಗ ಉತ್ತರದಲ್ಲಿ 6-4-67 ರಿಂದ 27-4-67ರವರೆಗೆ ನದರಿ ಪ್ರದೇಶಗಳಲ್ಲಿ ಕೆಲವು ಅಡಚಣೆಗಳುಂಟಾಗಿದ್ದವು ಎಂದು ಹೇಳಿದ್ದೀರಿ. ಈಗ ರಬಕವಿ, ಬನಹಟ್ಟಿ, ಮುಧೋಳ್ ಮುಂತಾದ ಕಡೆಗಳಲ್ಲಿ ಪವರ್ ಲೂಮುಗಳು, ಫಿಟ್ಟಿನ ಗಿರಣಿಗಳು ಎಲ್ಲಾ ಇರುವುದರಿಂದ ತೊಂದರೆಯಾಗಿದೆ. ಅವರಿಂದಲೂ ಮಿನಿಮಂ ಚಾರ್ಜ್ ವಸೂಲು ಮಾಡುತ್ತಿದ್ದಾರೆ. ಆದರಿಂದ ಅದನ್ನು ವಜಾ ಮಾಡುವುದಕ್ಕೆ ಏನಾದರೂ ಆದೇಶ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೇಳುವುದು, ಇದರಲ್ಲಿ ಬಹಳ ಕಷ್ಟವಿದೆ. ಒಂದೊಂದು ಪರಿಸ್ಥಿತಿ ನಮ್ಮ ಹತೋಟಿಯಲ್ಲಿ ಇರುವುದಿಲ್ಲ. 500 ಕೆ. ವಿ. ಟ್ರಾನ್ಸ್‌ಫಾರ್ಮರ್ ತೆಗೆದುಕೊಂಡು ಹೋದಾಗ ಅದು ಫ್ಯೂಲ್ಯೂರ್ ಆಗಿದೆ. ಆದ್ದರಿಂದ ಆ ಪರಿಸ್ಥಿತಿ ಬಂದಿದೆ. ಅದಕ್ಕೆ ಹೆಚ್ಚಿನ ಕೆ.ವಿ. ಯ ಟ್ರಾನ್ಸ್‌ಫಾರ್ಮರ್ ಹಾಕಬೇಕಾಗುತ್ತದೆ.

ಶ್ರೀ ಎನ್. ಎಲ್. ಬೆಲ್ಲದ್.—ಇದೇ ರೀತಿ ವಿದ್ಯುಚ್ಛಕ್ತಿ ಸರಬರಾಜು ವಾರದಲ್ಲಿ 3-4 ಬಾರಿ ಬಂದ್ ಆಗಿರುತ್ತದೆ. ಉದಾಹರಣೆಗೆ ರಾಣೆಬೆನ್ನೂರಿನಲ್ಲಿ ವಾರದಲ್ಲಿ ನಾಲ್ಕು ದಿವಸ ವಿದ್ಯುಚ್ಛಕ್ತಿ ಸರಬರಾಜು ಆಗಲಿಲ್ಲ. ಅದಕ್ಕೆ ಕಾರಣ ಕೇಳಿದರೆ ಹರಿಹರದ ಟ್ರಾನ್ಸ್‌ಫಾರ್ಮರ್‌ನ ಕೆಪಾಸಿಟಿ ಕಡಿಮೆಯಾಗಿದೆ, ಮತ್ತು ಎರ್ನಾ ಕಡೆ ವಿದ್ಯುಚ್ಛಕ್ತಿ ಸರಬರಾಜು ಮಾಡುವುದರಿಂದ ತೊಂದರೆಯಾಗಿದೆ ಎಂದು ಹೇಳುತ್ತಾರೆ. ಈ ತೊಂದರೆ ಹೀಗೆ ಮುಂದುವರಿದರೆ ರೈತರಿಗೆ ಬಹಳ ಲುಕ್ಸಾನು ಆಗುತ್ತದೆ. ಈ ಬಗ್ಗೆ ಏನಾದರೂ ತೀವ್ರ ಆಲೋಚನೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ನಾನು ಒಪ್ಪಿಕೊಂಡಿದ್ದೇನೆ. ಎಲ್ಲೆಲ್ಲಿ ಲೋಡ್ ಹೆಚ್ಚಾಗಿದೆ, ಅದನ್ನು ತಿಳಿದುಕೊಂಡು ಹೆಚ್ಚಿನ ಪ್ರಮಾಣದಲ್ಲಿ, ಎಲೆಕ್ಟ್ರಿಸಿಟಿ ಬೋರ್ಡಿನವರು ಒದಗಿಸುತ್ತಿದ್ದಾರೆ, ಮತ್ತು ಎಲ್ಲೆಲ್ಲಿ ಲೋಡ್ ಅವಶ್ಯಕತೆ ಇದೆಯೆಂದು ನೋಡಿಕೊಂಡು ಕಳಿಸುತ್ತಾರೆ.

Pension Benefits to Chairman and Members of P.S.C.

*Q.—672. Sri S. S. ARAKERI (Ballolli).—

Will the Chief Minister be pleased to state.—

(*a*) the number of retired Chairman and Members of the Mysore Public Service Commission that get the pension benefits under recently promulgated rules and who they are ;

(*b*) whether the Chairman and two Members of the first Mysore Public Service Commission are getting the pension benefits ; if not the reasons for the exclusion ;

(*c*) whether it is a fact that a Member of the Mysore Public Service Commission who resigned recently without serving full period, gets the pension benefits ;

(*d*) the action Government proposes to take to provide pension benefits to the Chairman and Members of First Mysore Public Service Commission ?

*A.—Sri S. NIJALINGAPPA (Chief Minister).—

(*a*) Nil.
(*b*) No, as the Regulations were issued only recently.
(*c*) Yes, he is held eligible under the Regulations.
(*d*) Does not arise as the Regulations are prospective in effect.

Sri S. S. ARAKERI.—Whether our Government is aware of the fact that the Central Government has given pension benefit to the Union Public Service Commission Members with retrospective effect ?

ಶ್ರೀ ಎಸ್. ನಿಜಲಿಂಗಪ್ಪ.—ಆ ವಿಚಾರ ತಿಳಿಯದು.

Sri S. S. ARAKERI.—When was the Mysore Regulation passed ?

Sri S. NIJALINGAPPA.—The regulation was passed in January 18th of this year.